**ದಿಃ 17.09.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ನಂ. 1 , 2, 4 ರಿಂದ 6 ರವರ ಪರ ಶ್ರೀ ಆರ್ ಬಿ ಎಚ್ ವಕೀಲರಿಂದಃ**

ಪಾರ್ವತಮ್ಮ ಹಾಗೂ ಯಲ್ಲಮ್ಮ ಇವರು ಅಕ್ಕತಂಗಿಯರು ಎಂದರೆ ಸಾಕ್ಷಿ ಅವರು ಖಾಸ ಅಕ್ಕತಂಗಿಯರಲ್ಲ ಅಕ್ಕತಂಗಿಯರಾಗಬೇಕು ಎನ್ನುತ್ತಾರೆ. ಪಾರ್ವತಮ್ಮ ಹಾಗೂ ಯಲ್ಲಮ್ಮ ಇವರು ಅಣ್ಣತಮ್ಮಂದಿರ ಮಕ್ಕಾಳಬೇಕು ಎಂದರೆ ಸಾಕ್ಷಿ ನನಗೆ ಅವರ ಸಂಬಂಧ ಗೊತ್ತಿಲ್ಲ ಎನ್ನುತ್ತಾರೆ. ನೀಲವ್ವ ಅಂದರೆ ಪ್ರತಿವಾದಿ ನಂ. 2 ಯಲ್ಲಮ್ಮ ಇವರ ಮಗಳು ಎಂದರೆ ಇರಬಹುದು. ಸದರಿ ಯಲ್ಲಮ್ಮ ಹಾಗೂ ಪಾರ್ವತಮ್ಮ ಇವರು ಗದಗನಲ್ಲಿ ಒಂದೇ ಮನೆಯಲ್ಲಿ ಇರುತ್ತಿದ್ದರು ಎಂದರೆ ಸಾಕ್ಷಿ ಕೂಡಿ ಇರುತ್ತಿರಲಿಲ್ಲ ಎನ್ನುತ್ತಾರೆ. ಸಾಕ್ಷಿಗೆ ಈ ಹಂತದಲ್ಲಿ ರೇಶನ್ ಕಾರ್ಡನ ಒಂದು ಜರಾಕ್ಸ ಪ್ರತಿಯನ್ನು ತೋರಿಸಿ ಪಾರ್ವತವ್ವ ವೀರಭದ್ರಪ್ಪ, ನೀಲವ್ವ ಮತ್ತು ಅವರ ಮಕ್ಕಳ ಹೆಸರು ಒಂದೇ ರೇಶನ್ ಕಾರ್ಡನಲ್ಲಿ ಇದೆ ಎಂದರೆ ಸಾಕ್ಷಿ ಹೌದು ಎಂದು ಒಪ್ಪಿಕೊಳ್ಳುತ್ತಾರೆ. ಸದರಿ ದಾಖಲೆ ಜರಾಕ್ಸ ಪ್ರತಿಯಾದ ಕಾರಣ ನಿಶಾನೆಯಾಗಿ ಗುರುತಿಸಿರುವುದಿಲ್ಲ. ನನಗೆ ಈಗ ತೋರಿಸಿದ ಜರಾಕ್ಸ ಪ್ರತಿಯಲ್ಲಿ ನನ್ನ ಹೆಸರಾಗಲೀ ನನ್ನ ತಂದೆ ಹೆಸರಾಗಲೀ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಹುಬ್ಬಳ್ಳಿಯಲ್ಲಿರುತ್ತೇನೆ ಎನ್ನುತ್ತಾರೆ. ಪಾರ್ವತವ್ವ ಮತ್ತು ವೀರಭದ್ರಪ್ಪ ಬೇರೆ ಬೇರೆ ಇದ್ದರು ಎಂದು ಹೇಳಿದ್ದು ಅದನ್ನು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹಾಜರುಪಡಿಸಿಲ್ಲ ಎನ್ನುತ್ತಾರೆ. ಪಾರ್ವತಮ್ಮ ವೀರಭದ್ರಪ್ಪ ನೀಲವ್ವ ಹಾಗೂ ಅವರ ಮಕ್ಕಳು ಒಂದೇ ಮನೆಯಲ್ಲಿ ಇರುತ್ತಿದ್ದರೂ ಎಂದರೆ ಸಾಕ್ಷಿ ಅದು ಸರಿಯಲ್ಲ. ಸಾಕ್ಷಿ ಅವರ ಬೇರೆ ಬೇರೆ ಇರುತ್ತಾರೆ ಎನ್ನುತ್ತಾರೆ. ಪಾರ್ವತಮ್ಮ ಇವರನ್ನು ವೀರಭದ್ರಪ್ಪ ಹಾಗೂ ಅವರ ಹೆಂಡತಿ ಮತ್ತು ಮಕ್ಕಳು ಜೋಪಾನ ಜತನ ಮಾಡುತ್ತಿದ್ದರೂ ಎಂದರೆ ಸಾಕ್ಷಿ ಅವರ ಕೂಡ ನನ್ನ ತಂದೆಯು ಕೂಡ ಹೋಗಿ ನೋಡಿಕೊಳ್ಳುತ್ತಿದ್ದರು ಎನ್ನುತ್ತಾರೆ. ನಾನು ಇಂಜಿನಿಯರಿಂಗ ಓದಿರುತ್ತೇನೆ. ಸಾಕ್ಷಿಗೆ ಈ ಹಂತದಲ್ಲಿ ಒಂದು ಭಕ್ಷಿಷ ಪತ್ರದ ದೃಡೀಕೃತ ನಕಲನ್ನು ತೋರಿಸಲಾಗಿ ಸದರಿ ಭಕ್ಷಿಷ ಪತ್ರವನ್ನು ಪಾರ್ವತಮ್ಮ ಇವರು ನೀಲವ್ವ ಇವರಿಗೆ ಮಾಡಿಕೊಟ್ಟಿರುತ್ತಾರೆಂದರೆ ಸಾಕ್ಷಿ ವೀರಭದ್ರಪ್ಪ ಹಾಗೂ ಅವರ ಹೆಂಡತಿ ನೀಲವ್ವ ರೇವಿನ್ಯೂ

ಅಧಿಕಾರಿಗಳೊಂದಿಗೆ ಮಿಲಾಪೆಯಾಗಿ ಸೃಷ್ಟಿಮಾಡಿರುತ್ತಾರೆಂದು ನುಡಿಯುತ್ತಾರೆ. ಸದರಿ ಭಕ್ಷಿಷ ಪತ್ರದ ಪ್ರಕಾರ ನೀಲವ್ವ ಹೆಸರು ಉತಾರದಲ್ಲಿ ನಮೂದು ಆಗಿದೆ ಎಂದರೆ ಹೌದು ಎನ್ನುತ್ತಾರೆ. ಸದರಿ ಪಾರ್ವತಮ್ಮ ಈ ಎಲ್ಲಾ ಆಸ್ತಿಗಳಿಗೆ ಆಕೆಯೇ ಸಂಪೂರ್ಣ ಮಾಲೀಕಳು ಎಂದರೆ ಸಾಕ್ಷಿ ಸದರಿ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎನ್ನುತ್ತಾರೆ. ಕಲ್ಲಪ್ಪ ಹಾಗೂ ಪಾರ್ವತಮ್ಮ ಇವರಿಗೆ ಯಾರೂ ಮಕ್ಕಳು ಇರಲಿಲ್ಲ ಎಂದರೆ ಸರಿ. ಕಲ್ಲಪ್ಪ ಮೃತಪಟ್ಟ ನಂತರ ಪಾರ್ವತಮ್ಮ ಒಬ್ಬರೇ ವಾರಸುದಾರರು ಎಂದರೆ ಸಾಕ್ಷಿ ಅವರಿಗೆ ಬೇರೆ ಸ್ವಂತ ಮಕ್ಕಳು ಇರಲಿಲ್ಲ ಆದರೆ ತಿಪ್ಪೆರುದ್ರಪ್ಪ ಮತ್ತು ವೀರಭದ್ರಪ್ಪ ಎಂಬ ಸಾಕು ಮಕ್ಕಳು ಇದ್ದರು ಎನ್ನುತ್ತಾರೆ. ನನ್ನ ತಂದೆಯವರ ಪೂರ್ಣ ಶಿಕ್ಷಣ ಹೊಸಪೇಟೆಯಲ್ಲಿ ಎಂದರೆ ಸಾಕ್ಷಿ ಅವರ 10 ನೇ ತರಗತಿ ವಿದ್ಯಾಭ್ಯಾಸ ಹೊಸಪೇಟೆಯಲ್ಲಿ ಆಗಿದೆ ಉಳದದ್ದು ಗೊತ್ತಿಲ್ಲ ಎನ್ನುತ್ತಾರೆ. ಸಾಕ್ಷಿಗೆ ಈ ಹಂತದಲ್ಲಿ ಹೊಸಪೇಟೆ ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜ ನವರು ನೀಡಿರುವ ವ್ಯಾಸಾಂಗ ಪ್ರಮಾಣ ಪತ್ರ ತೋರಿಸಿ ಸದರಿ ದಾಖಲೆ ಪ್ರಕಾರ 8 ರಿಂದ 10 ನೇ ತರಗತಿಯವರಿಗೆ ಹೊಸಪೇಟೆಯಲ್ಲಿ ಶಿಕ್ಷಣ ಮುಗಿಸಿರುತ್ತಾರೆಂದರೆ ಸಾಕ್ಷಿ ಹೌದು ಎಂದು ಒಪ್ಪಿಕೊಂಡಿದ್ದರಿಂದ ಸದರಿ ದಾಖಲೆಯನ್ನು ನಿಡಿ 1 ಎಂದು ಗುರುತಿಸಲಾಯಿತು. ನನ್ನ ತಂದೆ ಯಾವ ಇಸವಿಯಲ್ಲಿ ಹುಬ್ಬಳ್ಳಿಗೆ ಬಂದರು ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ನನ್ನ ತಂದೆ ಮೊದಲ ಬಾರಿಗೆ ಹುಬ್ಬಳ್ಳಿಗೆ ಬಂದಾಗ ಯಲ್ಲಮ್ಮ ಹಾಗೂ ಕೌತಾಳ ಇವರ ಮನೆಯಲ್ಲಿ ಇದ್ದರೂ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಸದರಿ ಆಸ್ತಿ ಪರಪ್ಪ ಹಂದಿಗೋಳ ಇವರ ಮೂಲ ಆಸ್ತಿಯಾಗಿತ್ತು ಎನ್ನುತ್ತಾರೆ. ಯಲ್ಲಮ್ಮರವರ ಅವರ ಮನೆಯವರು ಮರಣ ಹೊಂದಿದ ನಂತರ ಪರಪ್ಪ ಇವರು ಆಕೆಯನ್ನು ಉಪ ಜೀವನಕ್ಕೆಂದು ಹುಬ್ಬಳ್ಳಿಯಲ್ಲಿ ತಂದು ಇಟ್ಟಿದ್ದರೂ ಸಾಕ್ಷಿ ಇರಬಹುದು ಎನ್ನುತ್ತಾರೆ. ಸದರಿಯವರು ಉಪ ಜೀವನಕ್ಕೆ ಹೈನುಗಾರಿಕೆ ಮಾಡಿಕೊಂಡು ಜೀವನ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಯವರು ಲಗ್ನ ಆಗುವವರೆಗೂ ಸದರಿ ಯಲ್ಲಮ್ಮ ಇವರೇ ಅವರನ್ನು ನೋಡಿಕೊಳ್ಳುತಿದ್ದರೂ ಎಂದರೆ ಸಾಕ್ಷಿ ನನಗೆ ಮಾಹಿತಿ ಇದ್ದ ಪ್ರಕಾರ ನನ್ನ ತಂದೆ ಮದುವೆಯಾದ ನಂತರವೇ ಹುಬ್ಬಳ್ಳಿಗೆ ಬಂದಿರುತ್ತಾರೆ. ನನ್ನ ತಂದೆಯ ಮದುವೆ 1963 -64 ರಲ್ಲಿ ಆಗಿರಬಹುದು. ನನ್ನ ತಂದೆಯವರು ಬೇಂಗೇರಿ ಖಾದಿ ಗ್ರಾಮದಲ್ಲಿ ನೌಕರಿ ಮಾಡುತ್ತಿದ್ದರೆ ಎಂದರೆ ಸರಿ. ಅವರು ಯಾವಾಗ ನೌಕರಿಗೆ ಸೇರಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಯವರು ಉದಯನಗರದಲ್ಲಿ ನಿವೇಶನ ಖರೀದಿ ಮಾಡಿ ಮನೆ

ಕಟ್ಟಿಕೊಂಡಿದ್ದರು. ಸದರಿ ದಾವಾದಲ್ಲಿ ಉದಯನಗರದ ಆಸ್ತಿಯನ್ನು ನಾನು ಸೇರಿಸಿಲ್ಲ ಎಂದರೆ ಸಾಕ್ಷಿ ಸದರಿ ಆಸ್ತಿ ಪಿತ್ರಾರ್ಜಿತವಲ್ಲ ಎನ್ನುತ್ತಾರೆ. ಉದಯಗನರದ ಆಸ್ತಿಯಿಲ್ಲಿ ನನ್ನ ತಂದೆ ಹಾಗೂ ನಾವು ಇದ್ದೆವು. ಮತ್ತೆ ಗದಗದಲ್ಲಿ ನೀಲವ್ವ ವೀರಭದ್ರಪ್ಪ ಮತ್ತು ಅವರ ಮಕ್ಕಳು ಇರುತ್ತಾರೆಂದರೆ ಸರಿ. ನನ್ನ ತಂದೆಯವರಿಗೆ ಉದಯನಗರದ ಆಸ್ತಿ ಕೊಂಡುಕೊಳ್ಳುವ ಮೊದಲು ಬೇರೆ ಯಾವುದೇ ಆಸ್ತಿ ಇರಲಿಲ್ಲ ಎಂದರೆ ಸರಿ. ಆ ಕಾರಣಕ್ಕೆ ಕಲ್ಲಪ್ಪ ಇವರು ಗದಗನ ಆಸ್ತಿಯನ್ನು ಭಕ್ಷಿಷ ಮಾಡಿದ್ದರು ಎಂದರೆ ಸಾಕ್ಷಿ ಹೌದು ಲಗ್ನದ ಸಮಯದಲ್ಲಿ ಮಾಡಿದ್ದರು ಎನ್ನುತ್ತಾರೆ. ಸದರಿ ಆಸ್ತಿಯ ಸಿಟಿ ಸರ್ವೆ ನಂಬರ 6294 ಎನ್ನುತ್ತಾರೆ. ಸದರಿ ಆಸ್ತಿಯನ್ನು ಈ ದಾವೆಯಲ್ಲಿ ತೋರಿಸಿಲ್ಲ ಎಂದರೆ ಸಾಕ್ಷಿ ಸದರಿ ಆಸ್ತಿ ಇದೆ ಎನ್ನುತ್ತಾರೆ. ಸಾಕ್ಷಿಗೆ ಈ ಹಂತದಲ್ಲಿ ಭಕ್ಷಿಷ ಪತ್ರದ ದೃಡೀಕೃತ ನಕಲನ್ನು ತೋರಿಸಿ ಇದೇನಾ ನಿಮ್ಮ ತಂದೆಗೆ ಭಕ್ಷಿಷ ಪತ್ರ ಆಗಿದ್ದು ಎಂದರೆ ಸಾಕ್ಷಿ ಹೌದು ಎಂದು ನುಡಿದಿದ್ದರಿಂದ ಸದರಿ ದಾಖಲೆಯನ್ನು ನಿಡಿ 2 ಎಂದು ಗುರುತಿಸಲಾಯಿತು. ನನ್ನ ತಂದೆಯವರು 2013 ರಲ್ಲಿ ಮರಣ ಹೊಂದಿದ್ದು ವಾರಸಾ ಪ್ರಕಾರ ನನ್ನ ಹೆಸರನ್ನು ನಿಶಾನೆ ಡಿ 2 ಆಸ್ತಿಗೆ ದಾಖಲು ಮಾಡಿಕೊಂಡಿದ್ದೇನೆ. ನಾನು ಹಾಜರುಪಡಿಸಿರುವ ದಾಖಲೆಗಳಲ್ಲಿ ಕಲ್ಲಪ್ಪ ನನ್ನ ತಂದೆಗೆ ಕೊಟ್ಟಿರುವಂತಹ ಆಸ್ತಿ ಉತಾರಗಳು ನನ್ನ ತಂದೆಯವರ ಹೆಸರಿನ್ನಲ್ಲಾಗಲೀ ಅಥವಾ ನನ್ನ ಹೆಸರಿನಲ್ಲಾಗಲೀ ಇಲ್ಲ ಎಂದರೆ ಸರಿ. ನನ್ನ ತಂದೆಯವರ ಆಸ್ತಿಯಾದ ಸಿಟಿಎಸ್ ನಂ 6294/1 ಇದನ್ನು ಉದ್ದೇಶಪೂರ್ವಕವಾಗಿ ನಾನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿ ಉದ್ದೇಶಪೂರ್ವಕವಾಗಿ ಅಲ್ಲ ಆದರೆ ಮಿಸ್ ಆಗಿದೆ ಎನ್ನುತ್ತಾರೆ. ಖಾದಿ ಉದ್ಯಮದಲ್ಲಿ ಬೆಂಗೇರಿ ಅಷ್ಟೇ ಬೇಟಗೇರಿ ಕೂಡ ಪ್ರಸಿದ್ದ ಎಂದರೆ ಸರಿ. ನನ್ನ ತಂದೆ ಬೆಟಗೇರಿಯಲ್ಲಿ ಇರುತ್ತಿದ್ದರೂ ಎಂದರೆ ಸಾಕ್ಷಿ ನನ್ನ ತಂದೆ ಬೇರೆ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು ಹುಬ್ಬಳ್ಳಿಗೆ ಬಂದನಂತರ ಖಾದಿ ಉದ್ಯಮದಲ್ಲಿ ಕೆಲಸಕ್ಕೆ ಸೇರಿದರು ಎಂದು ನುಡಿಯುತ್ತಾರೆ. ನನ್ನ ತಂದೆ ಯವರು ಖಾದಿ ಉದ್ಯಮದಲ್ಲಿ ಬೇಟೆಗೆರಿಯಲ್ಲಿ ಇದ್ದ ಕಾರಣ ಗದಗಗೆ ಹೋಗಿ ಬಂದು ಮಾಡುತ್ತಿದ್ದರೂ ಎಂದರೆ ಸರಿ. ನನ್ನ ತಂದೆಯವರು ಗದಗದಲ್ಲಿ ಪಾರ್ವತಮ್ಮ ಹಾಗೂ ವೀರಭದ್ರಪ್ಪ ಇರುವಂತಹ ಮನೆಗೆ ಹೋಗಿ ಬಂದುಮಾಡುತ್ತಿದ್ದರೂ ಎಂದರೆ ಸರಿ. ಗದಗನಲ್ಲಿ ಆಗುವಂತಹ ಎಲ್ಲಾ ಆಗುಹೋಗುಗಳು ನನ್ನ ತಂದೆಗೆ ಮಾಹಿತಿ ಇರುತ್ತಿದ್ದು ಎಂದರೆ ಸಾಕ್ಷಿ ಹೂಃ ಎಂದು ನುಡಿದು ನಂತರ ಏನು ತಿಳಿಸಬೇಕಾಗಿತ್ತು ಅದನ್ನು ಮಾಹಿತಿ ಕೊಡುತ್ತಿದ್ದರು ಎನ್ನುತ್ತಾರೆ. ನನ್ನ ತಂದೆಯವರು ಒಳ್ಳೆ ವಿದ್ಯಾವಂತರು

ಎಂದರೆ ಸರಿ. ನನ್ನ ತಂದೆಯ ಜೀವಿತ ಕಾಲದಲ್ಲಿ ಪಾರ್ವತಮ್ಮ ಹಾಗೂ ಕಲ್ಲಪ್ಪ ಇವರ ಮೇಲೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದರೆ ಸಾಕ್ಷಿ ಅವರಿಗೆ ಗೊತ್ತಿರಲಿಲ್ಲ ಆ ಕಾರಣಕ್ಕೆ ತೆಗೆದುಕೊಂಡಿರಲಿಲ್ಲ ಎನ್ನುತ್ತಾರೆ. ನನ್ನ ತಂದೆಯವರಿಗೆ ಕಲ್ಲಪ್ಪ ಇವರ ಮನೆಯಲ್ಲಿ ಯಾವ ದಾಖಲೆಗಳು ಆಗುತ್ತವೆ ಎಂಬ ಬಗ್ಗೆ ಮಾಹಿತಿ ಇತ್ತು ಆ ಕಾರಣಕ್ಕೆ ಇವರು ಅವರ ಜೀವಿತ ಅವಧಿಯಲ್ಲಿ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದರೆ ಸಾಕ್ಷಿ ಇಲ್ಲ ಅವರಿಗೆ ಮಾಹಿತಿ ಇರುತ್ತಿರಲಿಲ್ಲ ಎನ್ನುತ್ತಾರೆ. ವೀರಭದ್ರಪ್ಪ ಹಾಗೂ ನೀಲವ್ವ ಇವರ ಮಗಳು ರೇಣುಕಾ ಅಂದರೆ ಪ್ರತಿವಾದಿ ನಂ. 3 ಎಂದು ಇದ್ದಳು ಎಂದರೆ ಸರಿ. ಪ್ರತಿವಾದಿ ನಂ. 3 ಇವರ ಮನೆಯವರು ಪ್ರೆಸ ರಿಪೋರ್ಟರ ಇದ್ದರು ಎಂದರೆ ಸರಿ. ಪ್ರತಿವಾದಿ ನಂ. 3 ಇವರು ಅವರ ತಂದೆ ತಾಯಿಯ ಮೇಲೆ ಒಂದು ಸಿವಿಲ್ ಕೇಸ ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿಯವರು ಸಲ್ಲಿಸಿದ ಅರ್ಜಿ 3 ನೇ ಪ್ರತಿವಾದಿ ವಿರುದ್ದ ಆಗಿತ್ತು ಎಂದರೆ ಅವರವರ ನಡುವೆ ಏನಾಗಿತ್ತು ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ನನ್ನ ತಂದೆಗೆ ಹಾಗೂ ನನಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲ ಎಂದು ಗೊತ್ತಿದ್ದರೂ ಸಹ 3 ನೇ ಪ್ರತಿವಾದಿ ಹಾಗೂ ಅವರ ಮನೆಯವರ ಚಿತಾವನೆಯಿಂದ ನಾನು ಈ ಸುಳ್ಳು ದಾವೆ ದಾಖಲಿಸಿರುತ್ತೇನೆ ಎಂದರೆ ಅದು ಸರಿಯಲ್ಲ. ಸಾಕ್ಷಿಗೆ ಈ ಹಂತದಲ್ಲಿ ಕ್ರಯ ಪತ್ರದ ದೃಡೀಕೃತ ಪ್ರತಿಯನ್ನು ತೋರಿಸಿ ದಾವಾ ಶೆಡ್ಯೂಲ ಐ ಆಸ್ತಿ ಕಲ್ಲಪ್ಪ ವೀರಭದ್ರಪ್ಪ ಜ್ಯೋತಿ ಇವರು ದಿಃ29-04-1988 ರಲ್ಲಿ ಖರೀದಿ ಮಾಡಿದಂತಹ ಆಸ್ತಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ನಿಡಿ 3 ಎಂದು ಗುರುತಿಸಲಾಯಿತು. ಸಾಕ್ಷಿಗೆ ಈ ಹಂತದಲ್ಲಿ ಕ್ರಯ ಪತ್ರದ ದೃಡೀಕೃತ ಪ್ರತಿಯನ್ನು ತೋರಿಸಿ ದಾವಾ ಶೆಡ್ಯೂಲ ಎಚ್ ಆಸ್ತಿ ಮಂಜುನಾಥ ವೀರಭದ್ರಪ್ಪ ಜ್ಯೋತಿ ಇವರು ದಿಃ 23-04-1992 ರಲ್ಲಿ ಖರೀದಿ ಮಾಡಿದಂತಹ ಆಸ್ತಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ನಿಡಿ 4 ಎಂದು ಗುರುತಿಸಲಾಯಿತು. ಸಾಕ್ಷಿಗೆ ಈ ಹಂತದಲ್ಲಿ ಕ್ರಯ ಪತ್ರದ ದೃಡೀಕೃತ ಪ್ರತಿಯನ್ನು ತೋರಿಸಿ ದಾವಾ ಶೆಡ್ಯೂಲ ಜಿ ಆಸ್ತಿ ಬಸವರಾಜ ಮತ್ತು ಜಯಣ್ಣ ಇವರು ದಿಃ 14-06-2002 ರಲ್ಲಿ ಖರೀದಿ ಮಾಡಿದಂತಹ ಆಸ್ತಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ನಿಡಿ 5 ಎಂದು ಗುರುತಿಸಲಾಯಿತು.

**(ಮುಂದುವರೆದ ಪಾಟೀ ಸವಾಲಿನ್ನು ಮುಂದೂಡಲಾಯಿತು.)**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**

| | | |
|---|---|---|
| ಹೆಸರು | ಃ | ಅವರಾಜ ಕರಡೆಣ್ಣವರ |
| ತಂದೆಯ ಹೆಸರು | ಃ | ದಶರತಪ್ಪ |
| ವಯಸ್ಸು | ಃ | 70 ವರ್ಷ |
| ಉದ್ಯೋಗ | ಃ | ಶೇತ್ಕಿ |
| ವಾಸ ಸ್ಥಳ | ಃ | ಮಿತ್ರೀಕೋಟಿ |

ಹೆಸರು

ತಂದೆಯ ಹೆಸರು :

ವಯಸ್ಸು

ಉದ್ಯೋಗ e

ವಾಸ ಸ್ಥಳ

(2 ನೇ ಎದುರುದಾರರ ಪರ ವಕೀಲರು ಹಾಜರಿದ್ದು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಆದರೆ ಲಿಖಿತ ತಕರಾರು ಸಲ್ಲಿಸದಿರುವ ಕಾರಣ ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

ಸರ್ವೆ ನಂ.83/3 ಉಣಕಲ್ ಗ್ರಾಮದ 2023-24ನೇ ಸಾಲಿನ ಪಹಣಿಯನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಪಿ.1 ಎಂದು, ಸರ್ವೆ ನಂ.83/8 ಉಣಕಲ್ ಗ್ರಾಮದ 2023-24ನೇ ಸಾಲಿನ ಪಹಣಿಯನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಪಿ.2 ಎಂದು, ಸ್ವತ್ತಿನ ಅಳತೆಯ ದಾಖಲೆಯನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಪಿ.3 ಎಂದು, ಎಂ ಆರ್ ನಂ.ಟಿ892/2022-23ರ ಮ್ಯೂಟೇಶನ್ ರಜಿಸ್ಟರ ಪ್ರತಿಯನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಪಿ.4 ಎಂದು, ಎಂ ಆರ್ ನಂ.ಟಿ303/2012-13ರ ಮ್ಯೂಟೇಶನ್ ರಜಿಸ್ಟರ ಪ್ರತಿಯನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಪಿ.5 ಎಂದು, ಎಂ ಆರ್ ನಂ.ಟಿ780/2022-23ರ ಮ್ಯೂಟೇಶನ್ ರಜಿಸ್ಟರ ಪ್ರತಿಯನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಪಿ.6 ಎಂದು, ಅಸಲು ದಾವಾ ನಂ.162/2013ರ ಆಜ್ಞಾ ಪುಟದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಪಿ.7

**IN THE COURT OF II ADDL. SENIOR CIVIL JUDGE AND JMFC, HUBBALLI.**

**OS.No.**359/2023

## Exhibits List

| | |
|---|---|
| ನಿಪಿ.1 | ಸರ್ವೆ ನಂ.83/3 ಉಣಕಲ್ ಗ್ರಾಮದ 2023-24 ನೇ ಸಾಲಿನ ಪಹಣಿ |
| ನಿಪಿ.2 | ಸರ್ವೆ ನಂ.83/8 ಉಣಕಲ್ ಗ್ರಾಮದ 2023-24 ನೇ ಸಾಲಿನ ಪಹಣಿ |
| ನಿಪಿ.3 | ಸ್ವತ್ತಿನ ಅಳತೆಯ ದಾಖಲೆ |
| ನಿಪಿ.4 | ಎಂ ಆರ್ ನಂ.ಟಿ892/2022-23 ರ ಮ್ಯೂಟೇಶನ್ ರಜಿಸ್ಟರ ಪ್ರತಿ |
| ನಿಪಿ.5 | ಎಂ ಆರ್ ನಂ.ಟಿ303/2012-13 ರ ಮ್ಯೂಟೇಶನ್ ರಜಿಸ್ಟರ ಪ್ರತಿ |
| ನಿಪಿ.6 | ಎಂ ಆರ್ ನಂ.ಟಿ780/2022-23 ರ ಮ್ಯೂಟೇಶನ್ ರಜಿಸ್ಟರ ಪ್ರತಿ |
| ನಿಪಿ.7 | ಅಸಲು ದಾವಾ ನಂ.162/2013 ರ ಆಜ್ಞಾ ಪುಟದ ದೃಢೀಕೃತ ನಕಲು |